**ದಿನಾಂಕಃ 16.04.2022**
**ಓ.ಎಸ್ ಃ 37/2015 ಮತ್ತು ಓ.ಎಸ್ 38/2015**
**ಪಿ ಡಬ್ಲ್ಯೂ ಃ 2**

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ 12 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಟಿ.ಎಸ್.ಆರ್ ರವರಿಂದ ಃ**

ಅಳಿ ಹಳ್ಳಿ ಗ್ರಾಮದಲ್ಲಿ ಸರ್ವೆ ನಂ. 6 ಮತ್ತು ಸರ್ವೆ ನಂ. 7 ಇದೆ ಎಂದರೆ ಸರಿ. ಸರ್ವೆ ನಂ. 6 ರ ವಿಸ್ತೀರ್ಣ 20 ಎಕರೆ 24 ಗುಂಟೆ ಎಂದರೆ ಸರಿ. ಸರ್ವೆ ನಂ. 7 ರ ವಿಸ್ತೀರ್ಣ 26 ಎಕರೆ 1 ಗುಂಟೆ ಎಂದರೆ ಸರಿಯಲ್ಲ. ಸರ್ವೆ ನಂ. 7 ರ ಚಕ್ಕುಬಂದಿ ಪೂರ್ವಕ್ಕೆ ಶಿಂಷ ನದಿ ಎಂದರೆ ಸರಿ. ಪಶ್ಚಿಮಕ್ಕೆ ಸರ್ವೆ ನಂ. 6 ಮತ್ತು ಕರಿಗೌಡರ ಜಮೀನು ಎಂದರೆ ಸರಿಯಲ್ಲ. ಸರ್ವೆ ನಂ. 7 ರ ಪಶ್ಚಿಮಕ್ಕೆ ಏನು ಇದೆ ಎಂದರೆ ನರಸಿಂಹಯ್ಯ ರವರ ಜಮೀನು ಇದೆ. ನರಸಿಂಹಯ್ಯ ಅವರ ಜಮೀನು ಯಾವ ಸರ್ವೆ ನಂ. ಅಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 7 ರ ಉತ್ತರಕ್ಕೆ ಕಿರಂಗೂರ್ ಎಲ್ಲೆ ಎಂದರೆ ಸರಿ. ದಕ್ಷಿಣಕ್ಕೆ ಶಿಂಷ ನದಿ ಮತ್ತು ಸರ್ವೆ ನಂ. 8 ಎಂದರೆ ಸರಿಯಲ್ಲ. ಸಾಕ್ಷಿಯು ನರಸಿಂಹಯ್ಯರವರ ಜಮೀನು ಇದೆ ಎಂದು ನುಡಿಯುತ್ತಾರೆ. ನರಸಿಂಹಯ್ಯ ಅವರ ಜಮೀನು ಯಾವ ಸರ್ವೆ ನಂ. ಅಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ.

ಸರ್ವೆ ನಂ. 6 ರ ಪೂರ್ವಕ್ಕೆ ಸರ್ವೆ ನಂ. 7 ಜಮೀನು ಇದೆ ಎಂದರೆ ಸರಿ. ಸರ್ವೆ ನಂ. 6 ರ ಪಶ್ಚಿಮಕ್ಕೆ ಸರ್ವೆ ನಂ. 5 ಹೊನ್ನೆಗೌಡ ಮತ್ತು ಸುಬ್ಬೆಗೌಡ ಅವರ ಜಮೀನು ಎಂದರೆ ಸಾಕ್ಷಿಯು ಸರ್ವೆ ನಂ. ಗೊತ್ತಿಲ್ಲ ಆದರೆ ಅವರ ಜಮೀನು ಇದೆ ಎಂದು ನುಡಿಯುತ್ತಾರೆ. ಉತ್ತರಕ್ಕೆ ಕಿರಿಂಗೂರ್ ಎಲ್ಲೆ ಎಂದರೆ ಸರಿ. ದಕ್ಷಿಣಕ್ಕೆ ಪರಕಲು ಮತ್ತು ಅದು ಆದ ಮೇಲೆ ಸರ್ವೆ ನಂ. 8 ಮತ್ತು 9 ಎಂದರೆ ಸರಿ.

ಸರ್ವೆ ನಂ. 6 ಮತ್ತು 7 ಕ್ಕೆ ಪ್ರತ್ಯೇಕವಾದ ಚಕ್ಕುಬಂದಿ ಇದೆ ಎಂದರೆ ಸರಿ. ಎರಡೂ ಸರ್ವೆ ನಂ. ನ ವಿಸ್ತೀರ್ಣಗಳು ಬೇರೆ ಬೇರೆ ಎಂದರೆ ಸರಿ. ಸರ್ವೆ ನಂ. 6 ವೆಂಕಟಕೃಷ್ಣಯ್ಯ ಅವರ ಕುಟುಂಬಕ್ಕೆ ಸೇರಿದ್ದು ಎಂದರೆ ಸರಿ. ಸರ್ವೆ ನಂ. 7 ಪಿಟ್ಟೇಗೌಡ ಅವರ ಕುಟುಂಬಕ್ಕೆ ಸೇರಿದ್ದು ಎಂದರೆ ಸರಿಯಲ್ಲ. ಸರ್ವೆ ನಂ. 6 ಮತ್ತು 7

ವೆಂಕಟಕೃಷ್ಣಯ್ಯ ಅವರ ಕುಟುಂಬಕ್ಕೆ ಸೇರಿದ್ದ ಎಂದರೆ ಸಾಕ್ಷಿಯು ಬೇರೆ ಬೇರೆ ಕುಟುಂಬಕ್ಕೆ ಸೇರಿದ್ದು ಎಂದು ನುಡಿಯುತ್ತಾರೆ. ನಾನು ಖರೀದಿ ಮಾಡಿದ ಜಮೀನು ವೆಂಕಟಕೃಷ್ಣಯ್ಯ ಅವರ ಕುಟುಂಬಕ್ಕೆ ಸೇರಿದ ಜಮೀನು ಎಂದರೆ ಸರಿ. ಪಿಟ್ಟೇಗೌಡ ಅವರಿಂದ ನಾನು ಯಾವುದೇ ಜಮೀನು ಖರೀದಿ ಮಾಡಿರುವುದಿಲ್ಲ. ಸರ್ವೆ ನಂ. 6 ಜಮೀನು ಸರ್ವೆ ನಂ. 7 ಯಾವಾಗ ಆಗಿರುತ್ತದೆ ಎಂದರೆ 1911 ರಲ್ಲಿ ಎಂದು ನುಡಿಯುತ್ತಾರೆ. ಸರ್ವೆ ನಂ. 7 ಕ್ಕೆ 1911 ರಲ್ಲಿ ಯಾವ ಹೊಸ ನಂ. ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಳೆ ಹಳ್ಳಿ ಗ್ರಾಮ ನಕ್ಷೆ ನಾನು ನೋಡಿರುವುದಿಲ್ಲ. ಸಾಕ್ಷಿಗೆ ಒಂದು ನಕ್ಷೆ ತೋರಿಸಲಾಗಿ ಅದರಲ್ಲಿ ಸರ್ವೆ ನಂ. 6 ಮತ್ತು 7 ಎರಡೂ ಇದೆ ಆದರೆ ನಕ್ಷೆ ಬಗ್ಗೆ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. 1911 ನೆ ಇಸವಿಯಲ್ಲಿ ಸರ್ವೆ ನಂ. 6 7 ಆದ ನಂತರ ನಮ್ಮ ಕುಟುಂಬದ ಹೆಸರಿಗೆ ಖಾತೆ ಪಹಣಿ ಆಗಿರುತ್ತದೆ ಎಂದರೆ ಆಗಿರುತ್ತದೆ ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ಸರ್ವೆ ನಂ. 7 ಕ್ಕೆ 11 ನೆ ಇಸವಿಯಿಂದ ಕಂದಾಯ ಕಟ್ಟಿರುತ್ತೀರಾ ಎಂದರೆ ಮಧ್ಯ ಕಟ್ಟಿರುತ್ತೇನೆ ಈಗ ಕಟ್ಟಿರುವುದಿಲ್ಲ. 05.06.1926 ಚೆನ್ನೇಗೌಡ ಬಿನ್ ನಂಜೇಗೌಡ ಅವರಿಗೆ ಒಂದು ಕ್ರಯ ಪತ್ರವನ್ನು ನಮ್ಮ ಕುಟುಂಬದವರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಲಿಂಗೆಗೌಡ ಬಿನ್ ಮಾರೇಗೌಡ ನಮ್ಮ ಕುಟುಂಬದವರು ಎಂದರೆ ಸರಿ. 1926 ನೆ ಇಸವಿಯಲ್ಲಿ ಸರ್ವೆ ನಂ. 6 ಸರ್ವೆ ನಂ. 7 ಆಗಿ ಬದಲಾವಣೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 ದಾಖಲೆಯನ್ನು ಯಾರು ಯಾವಾಗ ತಯಾರು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವೆ ಹಾಕುವಾಗ ನಿಪಿ 2 ದಾಖಲೆ ನನ್ನ ಬಳಿ ಇರಲಿಲ್ಲ ಎಂದರೆ ಸಾಕ್ಷಿಯು 2 ವರ್ಷದ ನಂತರ ತಯಾರು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ 2 ದಾಖಲೆಯನ್ನು ತಯಾರು ಮಾಡಿದವರನ್ನು ನ್ಯಾಯಾಲಯಕ್ಕೆ ಕರೆಸಿ ಸಾಕ್ಷಿ ನುಡಿಸಲು ತಯಾರಿದ್ದೀರ ಎಂದರೆ ನೋಟೀಸ್ ಜಾರಿ ಮಾಡಬೇಕೆಂದು ನುಡಿಯುತ್ತಾರೆ. ನಿಪಿ 2 ದಾಖಲೆ ಸಂಬಂದಪಟ್ಟ ಇಲಾಖೆಯಲ್ಲಿ ಇರುವುದಿಲ್ಲ, ಅದನ್ನು ಕೇಸಿಗೋಸ್ಕರ ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. 05.07.1967 ನೆ ಇಸವಿಯಲ್ಲಿ ಕೆಂಪೇಗೌಡ ಎನ್ನುವವರಿಗೆ ಚಿಕ್ಕನಂಜುಂಡ ಅವರು ಸರ್ವೆ ನಂ. 7 ರಲ್ಲಿ 2 ಎಕರೆ 20 ಗುಂಟೆ ಮಾರಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಬೋರೇಗೌಡ 20.05.1967 ರಲ್ಲಿ ಚಿಕ್ಕೊ ಎನ್ನುವವರಿಗೆ ಸರ್ವೆ ನಂ. 7 ರಲ್ಲಿ

2 ಎಕರೆ 7 ಗುಂಟೆ ಮಾರಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎರಡು ಕ್ರಯದ ಬಗ್ಗೆ ನನಗೆ ದಾವೆ ಹಾಕುವ ಕಾಲಕ್ಕೆ ಗೊತ್ತಿತ್ತು ಎಂದರೆ ಸರಿಯಲ್ಲ. ಸರ್ವೆ ನಂ. 7 ರ ಖಾತೆ ಪಹಣಿ 12 ನೆ ಪ್ರತಿವಾದಿ ಅವರ ಹೆಸರಿನಲ್ಲಿ ದಾವೆ ಹಾಕುವ ಕಾಲಕ್ಕೆ ಇತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನನ್ನ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ದಾವ ಆಸ್ತಿಯಲ್ಲಿ ದಾವ ಹಾಕುವ ಕಾಲಕ್ಕೆ ಸ್ವಾದೀನದಲ್ಲಿ ಇದ್ದ ಬಗ್ಗೆ ಹಾಜರು ಮಾಡಿದ ದಾಖಲೆಗಳು ಬಿಟ್ಟು ಬೇರೆ ದಾಖಲೆಗಳು ಇರುವುದಿಲ್ಲ. ದಾವೆ ಹಾಕುವ ಕಾಲಕ್ಕೆ ದಾವ ಆಸ್ತಿಯ ಸ್ವಾದೀನದಲ್ಲಿ ನಾನು ಇರಲಿಲ್ಲ ಎಂದರೆ ಸರಿಯಲ್ಲ. ದಾವೆ ಹಾಕುವ ಕಾಲಕ್ಕೆ ದಾವ ಆಸ್ತಿಯ ಸ್ವಾದೀನದಲ್ಲಿ 12 ನೆ ಪ್ರತಿವಾದಿಯು ಇದ್ದರು ಅದಕ್ಕಿಂತ ಮುಂಚೆ ಅವರ ಮಾರಾಟಗಾರರು ಸ್ವಾದೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ದಾವ ಆಸ್ತಿಗು ಮತ್ತು ನನಗು ಸಂಬಂಧ ಇರುವುದಿಲ್ಲ ಹಾಗು ನಾನು ದಾವ ಆಸ್ತಿಯ ಮಾಲಿಕನಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿ ನನಗೆ ಹೇಗೆ ಬಂತು ಎಂದರೆ ಸಾಕ್ಷಿಯು ಪಿತ್ರಾಜಿತ ಆಸ್ತಿ ಎಂದು ನುಡಿಯುತ್ತಾರೆ. 5 ಎಕರೆ 20 ಗುಂಟೆ ದಾವ ಆಸ್ತಿಯ ಚಕ್ಕುಬಂದಿ ನನ್ನ ಹೆಸರಿಗೆ ಹೇಗೆ ಬಂದಿರುತ್ತದೆ ಎಂದರೆ ಗೊತ್ತಿಲ್ಲಾ ಆದರೆ ಪಿತ್ರಾಜಿತ ಆಸ್ತಿ. 5 ಎಕರೆ 20 ಗುಂಟೆ ದಾವ ಆಸ್ತಿಯ ಚಕ್ಕುಬಂದಿ ನನ್ನ ಹೆಸರಿಗೆ ಬಂದ ಬಗ್ಗೆ ಪ್ರತ್ಯೇಕ ದಾಖಲೆ ಇರುವುದಿಲ್ಲ. ದಾವ ಚಕ್ಕುಬಂದಿ ಸರ್ವೆ ನಂ. ಒಳಗೆ ಯಾವ ದಿಕ್ಕಿಗೆ ಬರುತ್ತದೆ ಎಂದರೆ ಹೇಳಲು ಗೊತ್ತಾಗುವುದಿಲ್ಲ.

ಹಾಜರು ಮಾಡಿದ ರಸೀದಿಗಳು ಕೇಸಿಗೋಸ್ಕರ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸದರಿ ರಸೀದಿಗಳು ದಾವಾ ಆಸ್ತಿಗೆ ಸಂಬಂದಪಟ್ಟದ್ದಲ್ಲ ಎಂದರೆ ಸರಿಯಲ್ಲ. ದಾವೆ ಹಾಕುವ ಮುಂಚೆ ಸರ್ವೆ ನಂ. 6 ಮತ್ತು 7 ಬೇರೆ ಬೇರೆ ಎಂದು ಗೊತ್ತಿದ್ದರು ಕೂಡ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.